

# ದಸರಾ ದರ್ಬಾರ್

■ ಬನ್ನೂರು ಕೆ. ರಾಜು
(ಚಿತ್ರ: ಎಸ್.ಆರ್. ಮಧುಸೂಧನ್/ ಹಂಪಾ ನಾಗರಾಜ್)



ಮೈಸೂರು ದಸರಾಕ್ಕೆ ಈ ಸಲ 400ರ ಸಂಭ್ರಮ. ಕಳೆದ 400 ವರ್ಷಗಳಿಂದ ಇಷ್ಟೊಂದು ವೈಭವಪೂರ್ಣವಾಗಿ ನಡೆಯುತ್ತಿರುವ ಇನ್ನೊಂದು ನಾಡಹಬ್ಬ ಇಲ್ಲ. ಅದು ಪರಂಪರೆಯ ಸೊಬಗು.

ಅರಮನೆಯ ಹೊರಗಿನ ದಸರಾ ಎಲ್ಲರೂ ನೋಡಬಹುದು. ಆದರೆ ಅದೇ ವೇಳೆ ಅರಮನೆಯ ಒಳಗೆ ಖಾಸಗಿ ದರ್ಬಾರ್ ನೋಡಲು ಸಿಗುವುದು ನೂರರಷ್ಟು ಜನರಿಗೆ ಮಾತ್ರ. ಮಹಾರಾಜರ ಖಾಸಗಿ ದರ್ಬಾರ್ ಆಕರ್ಷಣೆಯೇ ಬೇರೆ. ಅರಸೊತ್ತಿಗೆ ಕಾಲದ ವೈಭವದ ಮರುಪ್ರದರ್ಶನವದು.

ಇದು ಖಾಸಗಿ ದಸರಾ. ಒಡೆಯರ್‌ರ ಕುಟುಂಬಕ್ಕೆ, ಆಪ್ತವರ್ಗಕ್ಕೆ, ಅರಮನೆಯ ಸಿಬ್ಬಂದಿಗೆ, ಕೆಲವೇ ಕೆಲವು ವಿಐಪಿಗಳಿಗೆ ಆಯ್ದ ಪ್ರವೇಶ. ಅರಮನೆಯ ಒಳಗೆ ದರ್ಬಾರ್ ಹಾಲ್‌ನಲ್ಲಿ ಸಾಂಪ್ರದಾಯಿಕವಾಗಿ ಸಕಲ ವಿಧಿ–ವಿಧಾನಗಳೊಂದಿಗೆ ವೈಭವೋಪೇತವಾಗಿ ಜರುಗುವ ಈ ಖಾಸಗಿ ದರ್ಬಾರ್‌ನ ಖದರ್ ಮಾತ್ರ 'ವಾರೆವ್ಹಾ' ಎನ್ನುವಂತಿದೆ.

ಪ್ರಪಂಚದಲ್ಲೇ ಪುರಾತನವಾದದ್ದೆಂದು ಹೇಳಲಾಗುವ ರತ್ನಖಚಿತ ಚಿನ್ನದ ಸಿಂಹಾಸನವನ್ನು ದಸರೆಗೆ ಮೊದಲೇ ದರ್ಬಾರ್ ಹಾಲ್‌ನಲ್ಲಿ ಜೋಡಿಸಲಾಗುತ್ತದೆ. ಈ ಸಿಂಹಾಸನ ಜೋಡಣೆಯ ಕೆಲಸ ಮಾಡುವವರು ಮೈಸೂರು ಸಮೀಪದ ಗೆಜ್ಜಗಳ್ಳಿ ಗ್ರಾಮದ ಆಯ್ದ ಜನರು. ಸಂಪ್ರದಾಯಬದ್ಧ ಪೂಜಾ ಕೈಂಕರ್ಯಗಳನ್ನು ನೆರವೇರಿಸಿ, ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಪ್ರತಿದಿನ ಸುಮಾರು ಮುಕ್ಕಾಲು ಗಂಟೆ ಕಾಲ ಸಿಂಹಾಸನವನ್ನು ಅಲಂಕರಿಸಿ ಖಾಸಗಿ ದರ್ಬಾರ್ ನಡೆಸುತ್ತಾರೆ.

ನವರಾತ್ರಿಯ ಮೊದಲ ದಿನ ಅಂದರೆ ಪಾಡ್ಯದ ದಿನ, ಒಡೆಯರ್‌ರಿಗೆ ಬೆಳಿಗ್ಗೆ ಎಣ್ಣೆ ಶಾಸ್ತ್ರ ಮಾಡಿ, ಅರಮನೆಗೇ ಬರುವ ಕ್ಷೌರಿಕರಿಂದ ಚೌಲ ಮಾಡಿಸಿ ನಂತರ ಮಂಗಳಸ್ನಾನ ಮಾಡಿಸುತ್ತಾರೆ. ಮುತ್ತೈದೆಯರು ಮತ್ತು ಪುರೋಹಿತರ ಹೆಂಗಸರು ಆರತಿ ಬೆಳಗುತ್ತಾರೆ. ಆ ಬಳಿಕ ಒಡೆಯರ್‌ರಿಂದ ಪೂಜೆ. ಮೊದಲಿಗೆ ಚಾಮುಂಡಿ ತೊಟ್ಟಿಯಲ್ಲಿ ಗಣಪತಿ ಪೂಜೆ; ಬಳಿಕ ಕಳಶ ಪೂಜೆ, ಕಂಕಣಪೂಜೆ. ಕುಲದೇವತೆ ಚಾಮುಂಡಿಯ ಸನ್ನಿಧಿಯಲ್ಲಿ ಒಡೆಯರ್ ಕಂಕಣ ಧರಿಸುತ್ತಾರೆ. ಒಡೆಯರ್ ಜೊತೆಗೆ ಪತ್ನಿ ಪ್ರಮೋದಾದೇವಿ ಕೂಡಾ ಮಹಾರಾಣಿಯ ಸ್ಥಾನದಲ್ಲಿ ನಿಂತು ತಾವೂ ಕಂಕಣ ಧರಿಸುತ್ತಾರೆ.

(8ನೇ ಪುಟ ನೋಡಿ)

